ಎಂದು. ನಾವು ಹಳ್ಳಿಗಳಲ್ಲಿ ಏನು ರೇಶಿಯೋ ಮೆಯಿಂಟೈನ್ ಮಾಡುತ್ತೇವೆ ಅದನ್ನೇ ಪಟ್ಟಣಗಳಲ್ಲಿ ಮೆಯಿಂಟೈನ್ ಮಾಡಬೇಕು ಅಥವಾ ಪಟ್ಟಣಗಳಲ್ಲಿ ಏನು ಮೆಯಿಂಟೈನ್ ಮಾಡುತ್ತೇವೆ ಅದನ್ನೇ ಹಳ್ಳಿಗಳಲ್ಲಿ ಮಾಡಬೇಕು ಎಂದು ಹೇಳಿದ್ದೇನೆ. ಇದರ ಬಗ್ಗೆ ನಾನು ಒಂದು ಕ್ರಮವನ್ನು ತೆಗೆದುಕೊಂಡು ವ್ಯವಸ್ಥೆ ಮಾಡುತ್ತಿದ್ದೇನೆ.

<u>ವಿಷಯ : ಹಿರೇಕೆರೂರಿನಲ್ಲಿ ಪ್ರಥಮ ದರ್ಜೆ ಕಾಲೇಜಿನ ನಿರ್ಮಾಣ.</u>

1299

ಶ್ರೀ ಬಿ. ಹೆಚ್. ಬನ್ನಿಕೋಡ್ ( ಹಿರೇಕೆರೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಪ್ರಥಮ ದರ್ಜೆ ಸರ್ಕಾರಿ ಕಾಲೇಜನ್ನು ಪ್ರಾರಂಭಿಸಿ ಎಷ್ಟು ವರ್ಷಗಳಾದವು? ಈಗ ಅಲ್ಲಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು ? (ವರ್ಗವಾರು ವಿದ್ಯಾರ್ಥಿಗಳ ವಿವರ ಕೊಡಿ)?

ಆ) ಸದರಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಪೂರ್ಣಾವಧಿ ಹಾಗೂ ಅಲ್ಪಾವಧಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು? ಪೂರ್ಣಾವಧಿಯ ಬೋಧಕ ಹಾಗೂ ಬೋಧಕೇತರ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು? ವಿವರ ಕೊಡುವುದು.

ಇ) ಸದರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪೀಠೋಪಕರಣಗಳ ಕೊರತೆ ಇರುವ ಬಗ್ಗೆ ಹಾಗೂ ಕಾಲೇಜು ನಡೆಸಲು ಯೋಗ್ಯವಲ್ಲದ ಬಾಡಿಗೆ ಉಗ್ರಾಣದಲ್ಲಿ ಕಾಲೇಜಿರುವ ಬಗ್ಗೆ ವಿಶ್ವವಿದ್ಯಾನಿಲಯದ ಉನ್ನತ ಸಮಿತಿ ತನ್ನ ಅಸಂತೋಷ ಸೂಚಿಸಿ ಕೂಡಲೇ ಸರ್ಕಾರ ಅವಶ್ಯವಿರುವ ಪೀಠೋಪಕರಣಗಳನ್ನು ಸಿಬ್ಬಂದಿ ವರ್ಗ ಮತ್ತು ಕಾಲೇಜು ಕಟ್ಟಡ ಒದಗಿಸುವ ಬಗ್ಗೆ ಸೂಚಿಸಿರುವುದನ್ನು ಸರ್ಕಾರ ಗಮನಿಸಿದೆಯೇ?

ಈ) ವಿಶ್ವವಿದ್ಯಾಲಯದ ಆದೇಶದ ಪ್ರಕಾರ ಸರ್ಕಾರದ ಪೀಠೋಪಕರಣ, ಸಿಬ್ಬಂದಿ ಮತ್ತು ಕಟ್ಟಡ ನಿರ್ಮಾಣದ ಬಗ್ಗೆ ಕೈಗೊಂಡ ಕ್ರಮಗಳೇನು?

ಉ) 1993-94 ನೇ ಆಯವ್ಯಯದಲ್ಲಿ ಕಾಲೇಜು ಕಟ್ಟಡದ ಬಗ್ಗೆ ಹಣ ಒದಗಿಸಲಾಗಿದೆಯೇ? ಹಾಗಿದ್ದಲ್ಲಿ ಈ ಕಟ್ಟಡದ ಅಂದಾಜು ಮೊತ್ತವೆಷ್ಟು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಸದರಿ ಕಾಲೇಜನ್ನು 1982-83 ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದು 10 ವರ್ಷಗಳಾಗಿವೆ.

| | <u>ಬಿ.ಎ</u> | | <u>ಬಿ. ಕಾಂ</u> | | |
|---|---|---|---|---|---|
| I | 286 | | 34 | | |
| II | 156 | | 22 | | |
| III | 117 | | 24 | | |
| ಒಟ್ಟು | 559 | + | 80 | = | 639 |

ಆ) ಪೂರ್ಣಾವಧಿ ಬೋಧಕರು - 10
ಅಲ್ಪಾವಧಿ ಬೋಧಕರು - 26
(ಅರೆಕಾಲಿಕ ಉಪನ್ಯಾಸಕರು)
ಪೂರ್ಣಾವಧಿ ಬೋಧಕೇತರರು - 08
---
44
---

ಖಾಲಿ ಇರುವ ಹುದ್ದೆಗಳು :
ಬೋಧಕರ ಹುದ್ದೆಗಳು - ಇಲ್ಲ
ಬೋಧಕೇತರ ಹುದ್ದೆಗಳು - 03

ಇ) ಹೌದು.

ಈ) ಪೀಠೋಪಕರಣ : 1993-94ನೇ ಸಾಲಿನ ಆಯವ್ಯಯದಲ್ಲಿ ಪೀಠೋಪಕರಣಗಳನ್ನು ನೀಡಲು ಅನುದಾನ ಒದಗಿಸಲಾಗಿದೆ. ಅದರಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಿರೇಕೆರೂರು - ಇಲ್ಲಿಗೂ ಪೀಠೋಪಕರಣಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಿಬ್ಬಂದಿ : ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ಆರ್ಥಿಕ ಮಿತವ್ಯಯದ ಸಡಿಲಿಕೆಯ ನಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕಟ್ಟಡ : ಕಾಲೇಜಿನ ಕಟ್ಟಡದ ನಿರ್ಮಾಣಕ್ಕಾಗಿ ಜಮೀನನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಇಲ್ಲ.
ಜಮೀನನ್ನು ಖರೀದಿಸಿದ ನಂತರ ಕಾಲೇಜಿನ ಕಟ್ಟಡ ನಿರ್ಮಾಣದ ಕಾರ್ಯದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ಹಿರೇಕೆರೂರಿನಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಪ್ರಾರಂಭವಾಗಿ 10 ವರ್ಷಗಳಾಗಿವೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಅದು ಒಂದು ಗೋಡೌನ್‌ನಲ್ಲಿ ಇದೆ, ಅಲ್ಲಿ ಪೀಠೋಪಕರಣಗಳು ಇಲ್ಲ ಮತ್ತು ವಿಶ್ವವಿದ್ಯಾನಿಲಯದವರು ಈ ಕಾಲೇಜಿನ ರೆಕಗ್‌ನಿಷನ್‌ನನ್ನು ವಾಪಸ್ ತೆಗೆದುಕೊಳ್ಳುತ್ತೇವೆ, ಎಂದು ಸರ್ಕಾರಕ್ಕೆ ತಿಳಿಸಿದ್ದಾರೆ. ಮಾನ್ಯ ಸಚಿವರು ಈ ವಿಚಾರಗಳನ್ನೆಲ್ಲಾ ಒಪ್ಪಿಕೊಳ್ಳುತ್ತಾರೆ. ಆದರೆ ಉತ್ತರ ನೋಡಿದರೆ 93-94 ನೇ ಸಾಲಿನ ಆಯವ್ಯಯದಲ್ಲಿ ಪೀಠೋಪಕರಣಕ್ಕೆ ಅನುದಾನ ಒದಗಿಸಲಾಗಿದೆ. ಅದರಂತೆ ಹಿರೇಕೆರೂರು ಪ್ರಥಮ ದರ್ಜೆ ಕಾಲೇಜಿಗೆ ಪೀಠೋಪಕರಣಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು. ವಿಶ್ವವಿದ್ಯಾನಿಲಯದವರು ಡಿರೆಕಗ್‌ನೈಸ್ ಮಾಡುತ್ತೇವೆ ಎಂದು ಹೇಳಿದರೂ ಸಹ ಇದಕ್ಕೆ ಎಷ್ಟು ಹಣ ಒದಗಿಸುತ್ತೀರಿ ಎಂದು ಸ್ಪಷ್ಟವಾಗಿ ಮಾನ್ಯ ಸಚಿವರು ತಿಳಿಸಬೇಕು. ಈ ವಿಚಾರವಾಗಿ ನಾನು ಮೂರು ವರ್ಷಗಳಿಂದ ಕೇಳುತ್ತಿದ್ದೇನೆ. ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕೆಲವರು ಕೆಳಗಡೆ ನೆಲದ ಮೇಲೆ ಕುಳಿತುಕೊಳ್ಳುತ್ತಾರೆ, ಕೆಲವರು ಬೆಂಚಿನ ಮೇಲೆ ಕುಳಿತುಕೊಳ್ಳುತ್ತಾರೆ. ಅಲ್ಲಿ ನೆಲದ ಮೇಲೆ ಕುಳಿತುಕೊಂಡು ವಿದ್ಯೆ ಕಲಿಯತಕ್ಕಂಥ ಪರಿಸ್ಥಿತಿ ಇದೆ. ಅದನ್ನು ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಾರೆ. ಅಲ್ಲಿ ಇರತಕ್ಕಂತಹ ತೊಂದರೆ ನೋಡಿದರೆ ಸರ್ಕಾರ ವಿದ್ಯಾರ್ಥಿಗಳಿಗಾಗಿ ಎಷ್ಟರ ಮಟ್ಟಿಗೆ ಗಮನ ಕೊಟ್ಟಿದೆ ಎಂದು

ಗೊತ್ತಾಗುತ್ತದೆ. ಆದರಿಂದ ತಾವು ದಯವಿಟ್ಟು ಅಲ್ಲಿಗೆ ಎಷ್ಟು ಫರ್ನಿಚರ್ಸ್ ಕೊಡುತ್ತೀರಿ, ಎಷ್ಟು ದಿವಸದಲ್ಲಿ ಕೊಡುತ್ತೀರಿ, ಎಷ್ಟು ಮೊತ್ತದ ಫರ್ನಿಚರ್ಸ್ ಈ ಕಾಲೇಜಿಗೆ ಕೊಡುತ್ತೀರಿ ಎಂದು ಹೇಳಬೇಕು. ಆನಂತರ 44 ಜನ ಶಿಕ್ಷಕರು ಇಲ್ಲಿ ಇದ್ದರೆ ಆದರಲ್ಲಿ 10 ಜನ ಮಾತ್ರ ಪೂರ್ಣ ಅವಧಿಯ ಶಿಕ್ಷಕರು ಇದ್ದಾರೆ. ಇನ್ನು ಉಳಿದಂತಹ 26 ಜನ ಅರೆಕಾಲಿಕ ಶಿಕ್ಷಕರು ಇದ್ದಾರೆಂದು ಹೇಳಿದ್ದಾರೆ. ಮೊದಲು 5 ಜನ ಇದ್ದರು, ಈಗ 10 ಜನ ಆಗಿದೆ ಎಂದು ಹೇಳುವುದಕ್ಕೆ ಮಾನ್ಯ ಸಚಿವರಿಗೆ ಸಂತೋಷವಾಗಿರಬೇಕು. ಅಲ್ಲಿ 26 ಜನ ಅರೆಕಾಲಿಕ ಶಿಕ್ಷಕರು ಇದ್ದಾರೆ ಎಂದರೆ ಅಲ್ಲಿಯ ಶಿಕ್ಷಣದ ವ್ಯವಸ್ಥೆ ಏನಾಗಿರಬೇಕು. ಮತ್ತು ಅವರನ್ನಾದರೂ ಖಾಯಂ ಮಾಡಿ ಎಂದರೆ, ಅವನ್ನು ಸರ್ಕಾರ ಮಾಡುತ್ತಾ ಇಲ್ಲ. ಆ ಶಿಕ್ಷಕರಾದರೂ ಸರಿಯಾಗಿ ವಿದ್ಯೆಯನ್ನು ಕಲಿಸುತ್ತಿದ್ದಾರೆ, ಇದನ್ನು ಇನ್ನು ಯಾವಾಗ ತುಂಬುತ್ತೀವೆ ಎಂದು ನಿರ್ದಿಷ್ಟವಾಗಿ ಹೇಳಿಲ್ಲ. ಈ ಪೂರ್ಣ ಅವಧಿಯ ಶಿಕ್ಷಕರನ್ನು ಅಲ್ಲಿಗೆ ಕೊಡುವ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು. ಮತ್ತು ಅಲ್ಲಿ ಬಿಲ್ಡಿಂಗ್ ಇಲ್ಲ, ಗೋಡೌನ್‌ನಲ್ಲಿ ಇದೆ ಎನ್ನುವುದನ್ನು ತಾವೇ ಒಪ್ಪಿಕೊಳ್ಳುತ್ತೀರಿ. ಜಮೀನು ಖರೀದಿಸಿದ ನಂತರ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕೈಗೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಈ ಉತ್ತರ ಸರಿ ಇಲ್ಲ. ಏಕೆಂದರೆ ನಾವು ಕಳೆದ ಎರಡು ವರ್ಷದಿಂದ ಪ್ರಯತ್ನ ಮಾಡಿ 14 ಎಕರೆ 20 ಗುಂಟೆ ಜಮೀನನ್ನು ಖಾಸಗಿಯವರಿಂದ ಪಡೆದು ಅದನ್ನು ತಹಶೀಲ್ದಾರ್, ಎ.ಸಿ; ಡಿ.ಸಿ. ಮೂಲಕ ಕೊಡಲಿಕ್ಕೆ ನಮಗೆ ಒಪ್ಪಿಗೆ ಇದೆ ಈ ಕೂಡಲೇ ನಿಮ್ಮ ಕಬ್ಜಾಕ್ಕೆ ಕೊಡುತ್ತೇವೆ ಎಂದು ಬರೆಯಿಸಿಕೊಟ್ಟಿದ್ದೇವೆ. ಆದರೆ ಅವರು ಜಮೀನನ್ನು ಖರೀದಿಸಬೇಕು ಎಂದು ಹೇಳಿದ್ದಾರೆ. ಜಮೀನು ಅವರ ತಾಬಕ್ಕೆ ಕೊಟ್ಟಿದೆ. ನಾವು ಲೀಜ್‌ಗೆ ಕೊಟ್ಟಿರುವ ಮಾಲಿಕರು. ಡಿಸಿಯವರು ಅದನ್ನು 18 ಸಾವಿರ ರೂಪಾಯಿಗೆ ನಿಗದಿ ಮಾಡಿದ್ದಾರೆ. ಈ ಕೂಡಲೇ ಕಾಲೇಜಿನ ಕಾರ್ಯ ಪ್ರಾರಂಭ ಮಾಡಿ ಅದು ಉಳಿಯುವ ವ್ಯವಸ್ಥೆ ಮಾಡಬೇಕು. ಕಟ್ಟಡವನ್ನು ಇದೇ ವರ್ಷ ಮಾಡಬೇಕು ಮತ್ತು ಹಣವನ್ನು ಒದಗಿಸಬೇಕು. ಮಾನ್ಯ ಸಚಿವರಿಗೆ ಅಲ್ಲಿಯ ಪರಿಸ್ಥಿತಿ ಸಂಪೂರ್ಣವಾಗಿ ಗೊತ್ತಿದೆ. ಅಲ್ಲಿ ವಿದ್ಯಾರ್ಥಿಗಳಿಗೆ ಆಗಿರುವಂತಹ ತೊಂದರೆಯನ್ನು ದೂರ ಮಾಡಲಿಕ್ಕೆ ತಾವು ಕಟ್ಟಡವನ್ನು, ಪೀಠೋಪಕರಣಗಳನ್ನು, ಬೋಧಕ ಸಿಬ್ಬಂದಿಗಳನ್ನು, ಒದಗಿಸುವ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ತಮ್ಮ ಮೂಲಕ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯ : ನಿಮ್ಮ ಮೊದಲಿನ ಪ್ರಶ್ನೆಗೆ ಉತ್ತರವೇನೆಂದರೆ ಆಕೆಡಮಿಕ್ ವರ್ಷ ಪ್ರಾರಂಭವಾಗುವುದಕ್ಕೆ ಮೊದಲು ನಿಮಗೆ ಫರ್ನಿಚರ್ಸ್ ಎಕ್ವಿಪ್‌ಮೆಂಟ್ ಕೊಡುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಸುಮಾರು 639 ಇದೆ. ಆದರೆ ಅಲ್ಲಿ 50 ಡೆಸ್ಕ್ ಇದೆ.

ಶ್ರೀ ಎಸ್.ಎಂ. ಯಾಹ್ಯ : ಯಾವ ರೀತಿ ಕೊಡುವುದಕ್ಕೆ ಆಗುತ್ತದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತು. ಯಾವ ಪ್ಯಾಟ್ರನ್, ಎಷ್ಟು ಬೆಂಚ್, ಎಷ್ಟು ಟೇಬಲ್ ಕೊಡುತ್ತೇವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಹಾಗೆ ಕೇಳುವುದು ಸರಿಯಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ : ವಿದ್ಯಾರ್ಥಿಗಳು ನೆಲದ ಮೇಲೆ ಕೂಡುತ್ತಿದ್ದಾರೆ. ಇದು ಸರಿಯೇ ?

ಶ್ರೀ ಎಸ್. ಎಂ. ಯಾಹ್ಯಾ : ನಿಮ್ಮ ಪ್ರಶ್ನೆಗೆ ಖಚಿತವಾದ ಉತ್ತರವನ್ನು ಹೇಳಿದ್ದೇನೆ.

ಹೆಚ್ಚು ಜನ ಪಾರ್ಟ್‌ಟೈಮ್‌ನವರು ಇದ್ದಾರೆ ಎಂದು ಹೇಳಿದ್ದೀರಿ. ಅಲ್ಲಿ ಪಾರ್ಟ್‌ಟೈಮ್‌ನವರು ಇದ್ದಾರೆ. 87 ರಿಂದ ಎಕಾನಮಿ ಆರ್ಡರ್ ಇತ್ತು, ಅಪಾಯಿಂಟ್‌ಮೆಂಟ್ ಮಾಡಲು ಆಗಲಿಲ್ಲ. ಈಗ ಆ ಎಕಾನಮಿ- ಆರ್ಡರನ್ನು ರಿಲ್ಯಾಕ್ಸ್ ಮಾಡಿದ್ದೇವೆ ; ಅದನ್ನು ತೆಗೆದುಹಾಕಿದ ಮೇಲೆ ಸ್ಪೆಶಲ್ ರಿಕ್ರೂಟ್‌ಮೆಂಟ್ ರೂಲ್ ಆಗಿದೆ. ಸಜೆಷನ್ಸ್ ಆ್ಯಂಡ್ ಅಬ್‌ಜೆಕ್‌ಷನ್ಸ್‌ಗೆ ಕಳುಹಿಸಿದ್ದೇವೆ. ಇನ್ನು ಎರಡು ಮೂರು ವಾರದಲ್ಲಿ ಸ್ಪೆಶಲ್ ರಿಕ್ರೂಟ್‌ಮೆಂಟ್ ರೂಲ್ ಮಾಡಿಕೊಂಡು ನೆಕ್ಸ್ಟ್ ಆಕ್ಯಾಡೆಮಿಕ್ ವರ್ಷದಲ್ಲಿ ಎಲ್ಲಾ ಲೆಕ್ಚರರನ್ನು ಕೊಡುತ್ತೇವೆ. ಇನ್ನು ನಿಮ್ಮ ಮೂರನೆಯ ಪ್ರಶ್ನೆ ಕಟ್ಟಡದ ಬಗ್ಗೆ ಹೇಳಬೇಕಾದರೆ ನನಗೆ ಗೊತ್ತಿದೆ. ಲ್ಯಾಂಡ್ ವಿಚಾರದಲ್ಲಿ ನೀವು ಹೆಚ್ಚು ಆಸಕ್ತಿ ವಹಿಸಿ ನಿಮ್ಮ ಪ್ರಯತ್ನದಿಂದ ಹದಿನಾಲ್ಕು ಎಕರೆ ಈಗ ಮೊನ್ನೆ ಮೊನ್ನೆ ನಮಗೆ ಸಿಕ್ಕಿದೆ; ಅದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ನೀವು ಬಹಳ ಪ್ರಯತ್ನ ಮಾಡಿದ್ದೀರಿ. ನಿಮ್ಮ ಮತಕ್ಷೇತ್ರದಲ್ಲಿ ಆಗಬೇಕು ಎಂದು ಹೇಳಿ ನೀವು ಹೆಚ್ಚು ಆಸಕ್ತಿಯನ್ನು ವಹಿಸಿದ್ದೀರಿ. ಲ್ಯಾಂಡ್ ಬಂದ ಮೇಲೆ ಬಿಲ್ಡಿಂಗ್ ಕಟ್ಟುವ ವಿಚಾರದಲ್ಲಿ ನಾವು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ದಯವಿಟ್ಟು ಈ ವರ್ಷ ಕಟ್ಟಡದ ಕೆಲಸವನ್ನು ಪಾರ್ರಂಭ ಮಾಡುತ್ತೀರಾ? ಅನುದಾನವನ್ನು ಬಿಡುಗಡೆ ಮಾಡಲು ಪ್ರಯತ್ನ ಮಾಡುತ್ತೀರಾ ಎಂಬುದನ್ನು ಹೇಳಬೇಕು.

ಅಧ್ಯಕ್ಷರು : ಈಗಾಗಲೇ ಮಂತ್ರಿಗಳು ಉತ್ತರ ಹೇಳಿದ್ದಾರೆ. ನಿಮ್ಮ ಪ್ರಶ್ನೆಗೆ ಏಳು ನಿಮಿಷಗಳನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಅವರು ಆಶ್ವಾಸನೆ ಕೊಡಲಿ ಎಂದು ನಾನು ಕೇಳುತ್ತಿದ್ದೇನೆ.

<u>ವಿಷಯ : ಬಿಜಾಪುರ ಸೈನಿಕ ಶಾಲೆಗೆ ಆರ್ಥಿಕ ಮುಗ್ಗಟ್ಟಿನಿಂದ ತೊಂದರೆ.</u>

1195

ಶ್ರೀ ಶಿವಾನಂದ ಹೆಚ್. ಕೌಜಲಗಿ ( ಬೈಲಹೊಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್ಥಿಕ ಮುಗ್ಗಟ್ಟಿನಿಂದ ಬಿಜಾಪುರ ಸೈನಿಕ ಶಾಲೆ ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಇ) ಈ ಸೈನಿಕ ಶಾಲೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಕೊಡಲಾಗುತ್ತಿರುವ ಸವಲತ್ತುಗಳಾವುವು ?

ಈ) ಈ ಸೈನಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಕಡೆಯಿಂದ ಹಣವನ್ನು ವಸೂಲು ಮಾಡುತ್ತಿರುವುದು ನಿಜವೆ? ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯ ಕಡೆಯಿಂದ ವಸೂಲು ಮಾಡಲಾಗುತ್ತಿರುವ ಹಣ ಎಷ್ಟೆಷ್ಟು ?